## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.

**ಸಿ.ಸಿ.ನಂಃ 523/2016**

**ಪಿರ್ಯಾದಿಃ** ಕರ್ನಾಟಕ ರಾಜ್ಯ (ಯಡ್ರಾಮಿ, ಪೋಲಿಸರಿಂದ)

ವಿರುದ್ಧ

**ಆರೋಪಿಃ** ಮಲ್ಕಪ್ಪ ತಳವಾರ ತಂದೆ ನಿಂಗಪ್ಪ ತಳವಾರ,
ವಯಸ್ಸುಃ 36 ವರ್ಷ, ಉದ್ಯೋಗಃ ಡ್ರೈವರ,
ಸಾಃ ಕಾಚಾಪೂರ, ತಾಃ ಜೇವರ್ಗಿ, ಜಿಃ ಕಲಬುರಗಿ.

## ಆಪಾದನೆ

ಶ್ರೀ ಡಿ. ರಮೇಶ, ಬಿ.ಎ.ಎಲ್, ಎಲ್.ಎಲ್.ಬಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ, ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ದಿನಾಂಕ 23-06-2016 ರಂದು ರಾತ್ರಿ 8-45 ಗಂಟೆಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯ ಸೈದಾಪೂರನ ಕ್ರಾಸ ಹತ್ತಿರದ ಹೂಗಾರ ಹೊಲದ ಹತ್ತಿರ ಚಿಗರಳ್ಳಿ ಕ್ರಾಸ-ಯಡ್ರಾಮಿ ರಸ್ತೆಯ ಮೇಲೆ, ಆಪಾದಿತನಾದ ನೀನು ಚಿಗರಳ್ಳಿ ಕ್ರಾಸ ಕಡೆಯಿಂದ ಯಡ್ರಾಮಿ ಕಡೆಗೆ ಟಂಟಂ ನಂಬರ ಕೆಎ-32-ಸಿ-3654 ನೇದ್ದನ್ನು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಅತಿವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿ, ಆ ಮೂಲಕ ಭಾ.ದಂ.ಸಂ. ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

ಆರೋಪಿತನಾದ ನೀನು ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿ ಎದುರಿನಿಂದ ಮಾದೇಗೌಡ ಇತನು ನಡೆಸಿಕೊಂಡು ಬರುತ್ತಿದ್ದ ಟ್ರ್ಯಾಕ್ಟರ ನಂಬರ ಕೆಎ-32-ಟಿ-7972, ಚೆಸ್ಸಿ ನಂಬರ ಡಬ್ಲೂಎಕ್ಸಸಿಎಫ್40606099778, ಇಂಜನ ನಂಬರ 431024 ಎಸ್‌ಟಿಎಫ್11259 ಮತ್ತು ಟ್ರಾಲಿ ನಂಬರ ಕೆಎ-32-ಟಿ-7639, ಚೆಸ್ಸಿ ನಂಬರ ಎಸ್‌ವಿಜೆಎ 11006 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಒಬ್ಬರಿಗೊಬ್ಬರು ಸೈಡ ಕೊಡದೆ ಒಮ್ಮೇಲೆ ಕಟ್ ಹೊಡೆದುದರಿಂದ ಟ್ರಾಕ್ಟರ ಟ್ರಾಲಿ ಟಂಟಂ ದಲ್ಲಿ ಕುಳಿತು ಹೋಗುತ್ತಿದ್ದ ಚಾಸಾ-1, 7 ಮತ್ತು ತಾಯಮ್ಮ, ದೊಡ್ಡಮ್ಮ ಇವರ ಪೈಕಿ ತಾಯಮ್ಮ ಮತ್ತು ದೊಡ್ಡಮ್ಮಳಿಗೆ ಬಡಿದುದರಿಂದ ಅವರಿಬ್ಬರೂ ರಸ್ತೆಯ ಮೇಲೆ ಬಿದ್ದು ಭಾರಿ ಗಾಯಗೊಂಡು ದೊಡ್ಡಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದು, ತಾಯಮ್ಮಳಿಗೆ ಹೆಚ್ಚಿನ ಉಪಚಾರಕ್ಕಾಗಿ ಕಲಬುರಗಿಗೆ ತೆಗೆದುಕೊಂಡು ಹೋಗುವಾಗ ಅವಳು ಕಲಬುರಗಿಯ ಸರಕಾರಿ ಆಸ್ಪತ್ರೆ ಆವರಣದಲ್ಲಿ ಆ ದಿನ ರಾತ್ರಿ 11-45 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

ಆರೋಪಿತನಾದ ನೀನು ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಅಪಘಾತಪಡಿಸಿದ ನಂತರ ಸದರಿ ಅಪಘಾತದ ಸುದ್ದಿಯನ್ನು ಸಂಬಂಧಪಟ್ಟ ಪೋಲಿಸರಿಗೆ ತಿಳಿಸದೆ ಆಸ್ಪತ್ರೆಯಲ್ಲಿ ಟಂಟಂನ್ನು ಬಿಟ್ಟು ಓಡಿ ಹೋಗಿದ್ದು, ಆ ಮೂಲಕ ಭಾ.ಮೊ.ವಾ. ಕಾಯ್ದೆ ಯ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿ?

ಸದರಿ ಆರೋಪಗಳು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು ಸದರಿ ಆರೋಪಗಳಿಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

ದಿನಾಂಕಃ 06-01-2021

ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ,
ಜೇವರ್ಗಿ.

**<u>ಆರೋಪಿತರ ಹೇಳಿಕೆ</u>**

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ಆರೋಪಣೆಯು ಅರ್ಥವಾಯಿತೆ?

ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುತ್ತಿರೋ?

ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ.

ದಿನಾಂಕಃ 06-01-2021

ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ,
ಜೇವರ್ಗಿ.